...IERCARA, (Coorg).

ಕೊಡಗು

ಸಂಪಾದಕರು:–ಶ್ರೀ ಪಿ. ಐ. ಬೆಳ್ಯಪ್ಪ, ವಾರ್ಷಿಕ ಚಂದಾ: ರೂ: ೩–೮–೦.

ಸಂಪುಟ ೨೩ | ತಾರೀಕು ೧೯—೧—೧೯೪೫ನೇ ಶುಕ್ರವಾರ. | ಸಂಚಿಕೆ ೩೩

ರಂಡ್‌ಸ್ಟಟನ ಧಾಳಿಗೆ ತಡೆ.

ಲೇ:– 'ಗುಪ್ತ'

ಈ ವಾರದ ಯುದ್ಧ ವಾರ್ತೆಯನ್ನು ಬರೆಯುವ ಮೊದಲು ಪತ್ರಿಕಾ ರಣರಂಗದಲ್ಲಿ ಗಲಭೆಯೆಬ್ಬಿಸಿ ಮಿತ್ರರ ಯೋಜನೆಗಳನ್ನು ತಲೆಕೆಳಗೆ ಮಾಡಿದ ಜರ್ಮನಿಯ ಸೇನಾನಿಯಾದ ರಂಡಸ್ಟಟನ ಸ್ವಲ್ಪ ಪರಿಚಯವನ್ನು ವಾಚಕರಿಗೆ ಮಾಡಿಕೊಡಲಿರುವ ರಂಡ್‌ಸ್ಟಟನು ಜಗತ್ತಿನ ಸಮರ ನಾಯಕರಲ್ಲಿ ಒಬನಾಗಿದ್ದಾನೆ. ಕಳೆದ ಅನೇಕ ವರ್ಷಗಳಿಂದ ಈತನು ಸೈನ್ಯ ಮತ್ತು ಯುದ್ಧ ಕಲೆಯಲ್ಲಿಯೇ ತನ್ನ ಜೀವನವನ್ನು ಸವೆಯಿಸಿದ್ದಾನೆ. ಈತನು ಬಹಳ ಚಿಕ್ಕ ವಯಸ್ಸಿನಲ್ಲಿ ಸೈನ್ಯಕ್ಕೆ ಸೇರಿದ ಈತನ ತಂದೆಯೂ ತನ್ನನ್ನು ಮಿಲಿಟರಿ ಶಾಲೆಗೆ ಕಳುಹಿಸಿದಂದಿನಿಂದ ಯುದ್ಧನೀತಿಯನ್ನು ಕಲಿಯುವುದಕ್ಕಾಗಿ ಬಂತು. ಇಂದು ಜರ್ಮನಿಯ ಸೈನ್ಯದಲ್ಲಿ ರಂಡ್‌ಸ್ಟಟನು ಅತಿ ಪ್ರಸಿದ್ಧನಾಗಿದ್ದಾನೆ. ಯುದ್ಧನೀತಿಯ ವಿಶೇಷ ವಿದ್ಯಾಲಯದಲ್ಲಿ ಆತನು ಸ್ವತಂತ್ರ ಆತನು ಜರ್ಮನಿಯ ಸೈನ್ಯ ಇತಿಹಾಸದಿಂದ ಸೇವಿಸಲ್ಪಟ್ಟ ಅಧಿಕಾರಿ ಸ್ವತಂತ್ರ ವಿಚಾರಿಯೂ ಆದ ಈತ ದೇಶದ ಹಿತಕ್ಕಾಗಿ ಮುಂದೆ ಬಂದಿದ್ದಾನೆ ಈತನು ಜರ್ಮನಿಯಲ್ಲಿ ಹಿಟ್ಲರನಿಗೂ ಹೆದರುವವನಲ್ಲ. ಯುದ್ಧ ವಾತಾವರಣವನ್ನು ಹುಟ್ಟಿಸಿದರೆ ಹಿಟ್ಲರನು ಈತನನ್ನಿಗೆ ಹೋಗಿ ವಿನಂತಿಸಿಕೊಳ್ಳಬೇಕು. ರಂಡ್‌ಸ್ಟಟನು ತನ್ನ ಈ ವರೆಗಿನ ಯುದ್ಧ ಚಾತುರ್ಯತೆಯಿಂದ ಜರ್ಮನರ ಪ್ರೀತಿಗೆ ಪಾತ್ರನಾಗಿರುವುದಲ್ಲದೆ ಇಡೀ ಜಗತ್ತನ್ನೇ ಬೆರಗುಗೊಳಿಸಿರುವನು. ಪೋಲೆಂಡಿನಲ್ಲಿ ಜರ್ಮನರಿಗೆ ಯುದ್ಧ ಪ್ರಾರಂಭದ ಕಾಲಕ್ಕೆ ದೊರೆತ ಜಯ ಈತನಿಂದಾಗಿ. ನಂತರ 1940 ರಲ್ಲಿ ಬೆಲ್ಜಿಯಂ, ಫ್ರಾನ್ಸುಗಳನ್ನು ಹಿಡಿದು ಮಿತ್ರರನ್ನು ಡಂಕರ್ಕಿನಲ್ಲಿ ಸದೆಬಡೆದದ್ದೂ ಈತನೆ ಆವರಿಗ ರೋಮೆಲ್ಲನು ಮರುಭೂಸೇನಾನಿಯಾಗಿದ್ದರಿಂದ ಈ ಜಯದ ಕೀರ್ತಿ ಆತನಿಗೆ ಹೋಯಿತು. 1942 ರಲ್ಲಿ ಯೂರೋಪಿನಲ್ಲಿ ಮಿತ್ರರನ್ನು ಎದುರಿಸುವ ಸರ್ವಹೊಣೆಯನ್ನು ಈತನಿಗೆ ಕೊಡಲಾಯಿತು. ಈತನು ಅಂದಿನಿಂದ ಬಹು ಶ್ರಮದಿಂದ ದುಡಿಯುತ್ತಿದ್ದಾನೆ. ಮಧ್ಯರಾತ್ರಿ ವರೆಗೆ ಆಫೀಸಿನಲ್ಲಿ ಕೆಲಸ ಮಾಡುತ್ತಾನೆ. ಬೆಳಿಗೆ ಏಳುವುದೂ ಬೇಗ, ತಿನ್ನುವುದು ಮಿತಿಯೂ, ಹೊಗೆಸೊಪ್ಪು, ಮದ್ಯ ಮಾದಕ ಪದಾರ್ಥಗಳನ್ನು ಈತ ಉಪಯೋಗಿಸುವದಿಲ್ಲ. ರಂಡ್‌ಸ್ಟಟನ ಈ ಕಥೆಯನ್ನು ಅವಲೋಕಿಸುವಾಗ ಹಿಟ್ಲರನ ನೆನಪೂ ಆಗಬಹುದು ಸಹ ಮಾದಕ ಪದಾರ್ಥಗಳನ್ನು ಸೇವಿಸು, ವಿಶ್ರಾಂತಿಯಿಂದ ಹಿಂತೆಗೆದುಕೊಳ್ಳುತ್ತಿದ್ದಾನೆ. ಮಿತ್ರರ ಪ್ರತಿಹತಿ ಜೋರಾಗಿ ನಡೆದಿದೆ. ಬ್ರಿಟಿಷ್ ಮತ್ತು ಅಮೇರಿಕನ್ ಸೇನೆಗಳು ಒಂದಾಗಿ ಹೋರಾಡುತ್ತಿವೆ.

ಇತ್ತ ರಷ್ಯಾ ಜರ್ಮನಿ ಕದನವು ಬಹು ಜೋರಾಗಿ ನಡೆಯುತ್ತಿದೆ. ರಷ್ಯನರನ್ನು ಒಂದೆರಡು ಕಡೆ ಜರ್ಮನರು ಹಿಮ್ಮೆಟ್ಟಿಸಿರುವರೆಂದು ಕಳೆದ ವಾರ ಬರೆದಿದ್ದೆನು. ರಷ್ಯನರು ಪುನಹ ಜೇತರಿಸಿಕೊಂಡು ಹೊಸ ಸೇನೆಗಳಿಂದ ಸಿದ್ಧರಾಗಿ ಮೂರು ಕಡೆಗಳಲ್ಲಿ ಪ್ರಚಂಡ ಪ್ರತಿಧಾಳಿಗಳನ್ನು ಕೈಕೊಂಡಿದ್ದರೆ. ಅವರು ಶಿಸ್ತಿನಿಂದೆ ಮುಂದೆ ಸಾಗುತ್ತಲೂ ಇದ್ದಾರೆ. ರಷ್ಯನ್ ಸೇನಾನಾಯಕ ವೊರ್ಷಲ್ ಕೊನೊಯಿಯವರು ಕೈಲ್‌ಸೆ ಮತ್ತು ಕ್ರಾಕೋ ಮಧ್ಯದ ಪ್ರಾಮುಖ್ಯರೈಲ್ವೆಯನ್ನು ಕತ್ತರಿಸಿ ಜರ್ಮನಿಗೆ ಸಾಗುವ ಹತ್ತಿರದ ದಾರಿ ನೋಡುತ್ತಿದ್ದಾರೆ. ರಷ್ಯನರು ಜರ್ಮನ್ ಗಡಿಯಿಂದ 70 ಮೈಲುಗಳ ದೂರದಲ್ಲಿದ್ದಾರೆ. ಜರ್ಮನರ ಪ್ರತಿಭಟನೆಯು ಯಾವ ರೀತಿಯಿಂದಲೂ ಕಡಿಮೆಯಾಗಿರುವದಿಲ್ಲ. ಬುದಾಪೆಸ್ಟ್ ನಗರವು ರಣಜೇಪತೆಯ ರುದ್ರನಾಟಕ ರಂಗವಾಗಿದೆ. ಜರ್ಮನರು ಅತ್ಯಸಾರವಾದ ಜನಬಲ, ಶಸ್ತ್ರಬಲಗಳನ್ನು ಮುಂದಿರಿಸಿ ಜೀವದ ಹಂಗುತೊರೆದು ಹೋರಾಡುತ್ತಿದ್ದಾರೆ. ಈ ವರೆಗೆ ತಡೆಯಿಲ್ಲದೆ ವಿಜಯವನ್ನು ಪಡೆಯುತ್ತಾ ಮುಂದೆ ಸಾಗಿದ್ದ ರಷ್ಯನರು ಈಗ ವಿಜಯಪಥದಲ್ಲಿ ಎಡತಾಗಿ ನಿಂತಿರುವ ಜರ್ಮನ್ ಸೇನೆಯನ್ನು ಕಿತ್ತೊಗೆಯುವ ಪಂಥತೊಟ್ಟು ಕಲಿತನದಿಂದ ಹೋರಾಡುತ್ತಿದ್ದಾರೆ.

ಈ ಮಧ್ಯೆ ಪೂರ್ವಭಾಗದಲ್ಲಿ ಅಮೇರಿಕನರು ಈ ವಾರದಲ್ಲಿ ಹೇಳಿಕೊಳ್ಳಬಹುದಾದ ಒಂದು ಅಭಿಯೋಗವನ್ನು ಹೂಡಿದ್ದಾರೆ. ಶಾಂತಸಾಗರದ ಫಿಲಿಪ್ಪೈನ್ ದ್ವೀಪ ಕುಟುಂಬದ ದೊಡ್ಡ ದ್ವೀಪಗಳಲ್ಲೊಂದಾದ ಲೂಝೊನ್‌ನಲ್ಲಿ ಅಮೇರಿಕನರ ದಂಡು ಹೋಗಿ ಇಳಿದಿದೆ. ಇದೇ ಅಲ್ಲ, ಸುಮಾರು 22 ಮೈಲುಗಳಷ್ಟು ಅವರು ಮುಂದೆ ಸಾಗಿಯೂ ಇದ್ದಾರೆ. ಜಪಾನರು ತಿಳಿಸುತ್ತಿರುವಂತೆ ಕಂಡುಬರುವದಿಲ್ಲ. ಒಂದು ಅನಾಶಕ್ತಿಯ ಯುದ್ಧವು ಇಲ್ಲಿ ನಡೆದಿದೆಯೆನ್ನಬಹುದು. ಜಪಾನರ ಈ ನೀತಿಯ ಗುಟ್ಟು ಇನ್ನೂ ತಿಳಿದುಬಂದಿರುವದಿಲ್ಲ. ಆದರೂ ಜಪಾನರು ಈ ದ್ವೀಪವನ್ನು ರಕ್ತದ ಕಲುವೆ ಹರಿಸದೆ ಬಿಟ್ಟು ಕೊಡಲಿಕ್ಕಿಲ್ಲ. ಇದು ಶಾಂತಸಾಗರದಲ್ಲಿ ಸಾಕಷ್ಟು ಮಹತ್ವದ ದ್ವೀಪವಾಗಿದೆ. ಇದನ್ನು ಜಪಾನರು ಕಳಕೊಂಡರೆ ಫಿಲಿಪ್ಪೈನಿನಲ್ಲಿ ಅವರಿಗೆ ತುಂಬಾ ಹಾನಿಯೊದ್ದಂತಾಗುವದರಲ್ಲಿ ಸಂಶಯವಿಲ್ಲ. ಇದರಲ್ಲಿ ಜಪಾನರ ವಿಮಾನನಿಲ್ದಾಣಗಳೂ, ನೌಕಾ ಕೇಂದ್ರಗಳೂ ಇವೆ.

ನೋಟೀಸು.

ಎಲ್ಲಾ ಬತ್ತ ಲೆಸೆನ್ಸ್‌ದಾರರಿಗೆ–

ಚೀಫ್ ಕಮಿಶನರ್ ಸಾಹೇಬರವರ ತಾ. 11–1–45ರ ಮೆಮೊರಾಂಡಂ ನಂ. 406/D 3-45ರಲ್ಲಿ ನಮೂದಿಸಿದಮೇರೆ ಕೊಡಗಿನಲ್ಲಿ ಬತ್ತ ವ್ಯಾಪಾರ ಮಾಡಲು ಲೈಸೆನ್ಸನ್ನು ಹೊಂದಿದ ಎಲ್ಲಾ ವ್ಯಾಪಾರಿಗಳು 1945ನೇ ವರ್ಷದಲ್ಲಿ ಪೈಸೂರಿಗೆ ಬತ್ತ ಒದಗಿಸಿ ಕೊಡಲು ಕೊಡಗು ಪ್ರಾಂತೀಕ ಸಹಕಾರಿ ಫೆಡರೇಶನ್ನಿನ ಮತ್ತು ಇತ್ತ ವ್ಯಾಪಾರಸ್ಥರ ಸಂಘದ ಸಬ್ ಏಜೆಂಟರಾಗಿಯೇ ಬತ್ತ ಒದಗಿಸಬೇಕಾಗಿರುವುದರಿಂದ ಸಬ್ ಏಜೆಂಟರಾಗಲು ಇರಾದೆಪಡುವ ಎಲ್ಲಾ ವ್ಯಾಪಾರಿಗಳು ತಾರೀಕು 25–1–45ರ ಒಳಗೆ ಮೇಲ್ಕಂಡ ಫೆಡರೇಶನಿಗೆ ಅರ್ಜಿ ಬರಕೊಳ್ಳಬೇಕಾಗಿ ಈ ಮೂಲಕ ತಿಳಿಸೋಣವಾಗಿದೆ. ಅಲ್ಲದೆ ಮೇಲ್ಕಂಡ ತಾರೀಕಿನೊಳಗೆ ಅರ್ಜಿ ಬರಕೊಳ್ಳಲು ತಪ್ಪಿದಲ್ಲಿ ಅಂಥಾ ಅರ್ಜಿಯನ್ನು ಚೀಫ್ ಕಮಿಶನರವರಿಗೆ ಶಿಫಾರಸು ಮಾಡಲಾಗುವುದಿಲ್ಲವಾಗಿ ಸಹ ತಿಳಿಸೋಣವಾಗಿದೆ.

ಪಿ. ಐ. ಬೆಳ್ಯಪ್ಪ,
ಪ್ರೆಸಿಡೆಂಟರು.

ಮಾರಾಟಕ್ಕಿದೆ.

ಮಡಿಕೇರಿ–ಸಿದ್ದಾಪುರ ರಸ್ತೆಯ ಬಾಜಿನಲ್ಲು ಅಭ್ಯುತ್ತಮಂಗಲ ಗ್ರಾಮಕ್ಕೆ ಸೇರಿದ 60 ಏಕ್ರೆ ಒಳ್ಳೇ ಸ್ಥಿತಿಯಲ್ಲಿರುವ ಕಾಫಿ ತೋಟ, ಸುಮಾರು 450 ಬಿಟ್ಟ ನೀರಾವರಿ ಭೂಮಿ, ಆಳುಗಳಿಗೆ ಹೂಚು ಹಾಕಿದ ಲೈನ್ ಮತ್ತು ಸ್ಟೋರೀಸು, ಕಿತ್ತಳೆ ಯಾಲಕ್ಕಿ, ಬಾಳೆ, ಒಳ್ಳೆಮೆಣಸು ವಗೈರೆಯಿಂದ ಕೂಡಿದ ಒಟ್ಟು 78 ಏಕ್ರೆ ತೋಟ ಮಾರಾಟಕ್ಕಿದೆ. ಖರೀದಿದಾರರು ಖುದು ಅಜಮಾಯಿಸಿಯೇಗಲೀ ಯೂ ಕೆಳಗಿನ ವಿಳಾಸಕ್ಕೆ ಬರೆದುಕೊಂಡಾಗಲೀ ತಿಳಿದುಕೊಳ್ಳಬಹುದು.

ಡಿ. ವೆಂಕಟರಾಮ್,
ಅತ್ತಿಮಂಗಲ ತೋಟ,
4-3 ಸಿದ್ದಾಪುರ.

The Canara Banking Corporation Ltd.
ದಿ ಕೆನರಾ ಬ್ಯಾಂಕಿಂಗ್ ಕೋರ್ಪೊರೇಶನ್ ಲಿಮಿಟೆಡ್.

ನೋ ಟೀ ಸು.

ಈ ಕೆಳಗೆ ಕಾಣಿಸಿದವರು ಈ ಬ್ಯಾಂಕಿನಿಂದ ಚಿನ್ನಾಭರಣಗಳ ಮೇಲೆ ಪಡಕೊಂಡ ಸಾಲದ ಮೊಬಲಗನ್ನಾಗಲೀ ಅವುಗಳ ಬಡ್ಡಿಯನ್ನಾಗಲೀ, ಈ ತನಕ ಕೊಡದೆ ಇರುವುದರಿಂದ ಸದರಿಯವರಿಗೆ ರಿಜಿಸ್ಟರು ನೋಟೀಸು ಕೊಟ್ಟಲ್ಲಿ ಕೆಲವು ವಿಳಾಸದಾರರು ಪತ್ತೆ ಇಲ್ಲವೆಂದೂ, ಕೆಲವು ವಿಳಾಸದಾರರು ಮೃತಪಟ್ಟರುವುದಾಗಿಯೂ ವಾಪಾಸು ಬಂದಿರುವುದರಿಂದ ಸದರಿ ಸಾಲಗಳಲ್ಲಿ ಜವಾಬ್ದಾರಿಗಳಿರುವ ಸಾಲಗಳನ್ನು ಇದೇ ಬರುವ ಫೆಬ್ರವರಿ ತಾರೀಕು 3ನೇ ಶನಿವಾರ ಮಧ್ಯಾಹ್ನ 1 ಗಂಟೆಗೆ ಬ್ಯಾಂಕಿನ ಆಫೀಸಿನಲ್ಲಿ ಬಹಿರಂಗವಾಗಿ ಹರಾಜು ಮಾಡಲಾಗುವುದು.

ಸಾಲದ ನಂ.	ಸಾಲಗಾರರ ಹೆಸರು ಮತ್ತು ವಿಳಾಸ.	ಸಾಲದ ಮೊಬಲಗು
932/41	ಬೊಜ್ಜಂಗಳ ಸೋಮಯ್ಯ, ಪೂವಯ್ಯನವರ ಮಗ, ತೆರಾಲು ಗ್ರಾಮ, ಹುದಿಕೇರಿ.	15—0—
1020/41	ಬಲ್ಯತೀತಿರ ಚಂಗಪ್ಪ, ಮುತ್ತಣ್ಣನವರ ಮಗ, ಹರಿಹರ ಗ್ರಾಮ, ಶ್ರೀಮಂಗಲ	50—0—
	ಕೇಳಪ್ಪನ್, ಕೂಲಿ ಪಂಜರುಹೇಟಿ, ವೀರಾಜಪೇಟೆ ಪೋಸ್ಟು	5—0—
	ಬಿ. ಶ್ರೀನಿವಾಯ್ಯ, ಬೈರಂಬಾಡ್ಡಾಮ, ಅಮ್ಮತ್ತಿ ಪೋಸ್ಟು	35—0—
	ಬಿ. ಪಿ. ಪುರುಷೋತ್ತಮ್, ಬಿಟ್ಟಂಗಾಲ, ವೀರಾಜಪೇಟೆ,	40—0—

ಕೆ. ಮೊಧವಯ್ಯ,
ಎಜೆಂಟ್.

ಕೊ ಡ ಗು

ತಾ. ೧೯–೧–೧೯೪೫ನೇ ಶುಕ್ರವಾರ

ನಿ ವೇ ದ ನೆ.

ಯುದ್ಧದ ಸೊದಲು ಕ್ರೌನ್ ಹನ್ನೆರಡು ಪುಠಗಳಿಂದ ಹೊರಡುತ್ತಿದ್ದ 'ಕೊಡಗು' ಪತ್ರಿಕೆಯು ಕ್ರಮಶಃ ಪುಠ ಕಡಿಮೆಯಾಗುತ್ತಾ ಫೂಲ್ಸ್‌ಕೇಪ್ ನಾಲ್ಕು ಪುಠಗಳಿಗೆ ಇಳಿದುದೇಕೆ? ಕಳೆದ ನಾಲ್ಕೈದು ವಾರದಿಂದ ಡೆಮಿ ನಾಲ್ಕು ಪುಠವಲ್ಲಿದ್ದ ಪತ್ರಿಕೆಯು ಕಳೆದ ವಾರದಿಂದ ಎರಡು ಪುಠಕ್ಕೂ ಈ ವಾರ ಕ್ರೌನ್ ಆಕಾರದ ಎರಡು ಪುಠಕ್ಕೂ ಇಳಿದುದೇಕೆ? ಎಂಬುದಾಗಿ ಹಲವರು ಪ್ರಶ್ನೆಗಳನ್ನು ಕೇಳುತ್ತಿರುವರು. ಎಷ್ಟೇ ಕಡಿಮೆಯಾದರೂ, 1944 ರ ಕಾಗದ ನಿಯಂತ್ರಣಾಜ್ಞೆ ಬರುವ ವರೆಗೆ ವಾಚಕರಿಗೆ ಫೂಲ್ಸ್‌ಕೇಪ್ 8 ಪುಠಗಳನ್ನು ಕೊಟ್ಟು, ಆದರಲ್ಲಿ ಸಾಧ್ಯವಾದಷ್ಟು ಉತ್ತಮ ವಿಚಾರಗಳನ್ನು ವಾಚಕರ ಮುಂದಿರಿಸಿದೆವು. ಆದರೆ ಮೇಲಿನ ಆಜ್ಞೆ ಜಾರಿಗೆ ಬಂದುದರಿಂದ ಕೇವಲ 4 ಪುಠಗಳನ್ನು ಮಾತ್ರ ಪ್ರಕಟಿಸಬೇಕಾಗಿ ಬಂತು. ಈ ನಿಯಂತ್ರಣದಿಂದಾಗಿಯೇ ಕಾಗದವು ಮಾರ್ಕೆಟಿನಲ್ಲಿ ದೊರೆಯದೆ ತೊಂದರೆಯೂದ ಕಾರಣ ಕೇಂದ್ರ ಸರಕಾರಕ್ಕೆ ನ್ಯೂಸ್‌ಪ್ರಿಂಟ್ ಕಾಗದ ಕೊಡಲು ಮನವಿಮಾಡಿಕೊಂಡೆವು. ಇದಕ್ಕೆ ಮೊದಲು ಸ್ವತಂತ್ರವಾಗಿ, ಸ್ಥಳೀಯ ಸರಕಾರದ ಮೂಲಕ ಬರೆದುಕೊಂಡರೂ ನ್ಯೂಸ್‌ಪ್ರಿಂಟ್ ಒದಗಿಸಲಾಗುವದಿಲ್ಲವೆಂದು ಕೇಂದ್ರ ಸರಕಾರವು ಬರೆದಿತ್ತು. ಆದರೂ ಅಖಿಲ ಭಾರತ ದೇಶೀಯ ಭಾಷೆಗಳ ಪತ್ರಿಕಾ ಸಂಘದ ಮೂಲಕ ಪ್ರಯತ್ನಿಸಿದ್ದರಿಂದ ಕೇಂದ್ರ ಸರಕಾರದವರು ಸ್ವಲ್ಪ ಕಾಗದ ಕೊಡಲೊಪ್ಪಿದರು. ಆದರೆ ಈ ಕಾಗದವು ನಮ್ಮ ಆವಶ್ಯಕತೆಯನ್ನು ಎಂದೂ ಪೂರೈಸುವದಿಲ್ಲ. ನಮ್ಮ ಪತ್ರಿಕೆಯ ಆಕಾರವನ್ನು ಕಡಿಮೆ ಮಾಡಿ ರಾಯಲ್ ಆಕಾರದ ನಾಲ್ಕು ಪುಠಗಳಲ್ಲಿ ಕೊಡುವುದಾದರೂ ವಾರಕ್ಕೆ ಈ ಕಾಗದದಿಂದ 1,100 ಪ್ರತಿಗಳನ್ನು ಮುದ್ರಿಸಲಾಗುದು. ಇನ್ನುಳಿದ 400 ಚಂದಾದಾರರಿಗೆ ಪತ್ರಿಕೆ ಕಳುಹಿಸುವದು ಹೇಗೆ? ಈ ರೀತಿ ಕೇಂದ್ರ ಸರಕಾರದಿಂದ ಕಾಗದ ದೊರೆತರೂ ನಮ್ಮ ಸಮಸ್ಯೆಯು ಬಗೆಹರಿಯದೆ ಕಷ್ಟದಲ್ಲಿರಬೇಕಾಗಿದೆ. ಹೊಸ ಚಂದಾದಾರರನ್ನು ಮುಂದೆ ಸೇರಿಸುವದಿಲ್ಲ; ಈಗಿರುವ ಚಂದಾದಾರರಿಗೆ ಬೇಕಷ್ಟು ಕಾಗದವನ್ನು ಒದಗಿಸಿಕೊಡಬೇಕೆಂದು ಕೇಂದ್ರ ಸರಕಾರಕ್ಕೆ ಬರೆದಿರುವೆವು. ಇದಕ್ಕೆ ಯಾವ ರೀತಿಯ ಉತ್ತರ ಬರವದೊ ನೋಡಬೇಕು. ಈ ರೀತಿ ಕಾಗದದ ಅಭಾವದಿಂದ ಉಪಸ್ಥಿತವಾಗಿರುವ ತೊಂದರೆಯು ಅವರ್ಣನೀಯವಿದೆ. ಇಂಥಾ ಸಂದರ್ಭದಲ್ಲಿ ನ್ಯೂಸ್‌ಪ್ರಿಂಟ್ ಕಾಗದ ಬಿಟ್ಟು ಬೇರೆ ಕಾಗದ ಉಪಯೋಗಿಸುವದೂ ನಿಶಿದ್ಧವಾಗಿದೆ. ಹೇಗಿದ್ದರೂ ಅನ್ಯರಾದ ಚಂದಾದಾರರ ಬೆಂಬಲವಿದ್ದರೆ ಈ ಎಲ್ಲಾ ಎಡರುಗಳನ್ನು ಧೈರ್ಯದಿಂದ ಎದುರಿಸಿ ಎಂದಿನಂತೆ ನಮ್ಮ ಅಳಿಲುಸೇವೆಯನ್ನು ಸಲ್ಲಿಸುವೆವು. ನಮ್ಮ ಪ್ರತಿಯೊಬ್ಬ ಮಾನ್ಯ ಚಂದಾದಾರನೂ ವಾರ್ಷಿಕ ಚಂದಾವನ್ನು ಮುಂಗಡವಾಗಿ ಸಾವತಿ ಮಾಡಬೇಕು. ಚಂದಾಬಾಕಿ ಇರುವ ಯಾರಿಗೂ ಪತ್ರಿಕೆ ಕಳುಹಿಸಲಿಕ್ಕಾಗುವದಿಲ್ಲ. ಈ ಸರಿಗೆ ಒಂದು ವರ್ಷ ಚಂದಾ ಬಾಕಿಯಾದರೂ ಮುಂದಿನ ವರ್ಷ ವಸೂಲ್ಮಾಡಿಕೊಳ್ಳುವ ಭರವಸೆಯಿಂದ ಅನೇಕರಿಗೆ ಪತ್ರಿಕೆ ಕಳುಹಿಸಿರುವೆವು. ಆದರೆ ಇಂದಿನ ದುರ್ದೈವಿ ಪ್ರಸಂಗದಲ್ಲಿ ಹಾಗೆ ಮಾಡುವದು ಸಾಧ್ಯವಿಲ್ಲ. ಮುಂಗಡ ಹಣ ಪಾವತಿಮಾಡಿದವರಿಗೆ ಮಾತ್ರ ಪತ್ರಿಕೆ ಕಳುಹಿಸುವದು ಸಾಧ್ಯವಾಗುವದು. ಈಗ ಹೊಸ ಚಂದಾದಾರನಾಗಲು ಮುಂಗಡ ದುಡ್ಡುಕೊಟ್ಟು ಅನೇಕರು ಬರುತ್ತಿದ್ದಾರೆ. ಆದ್ದರಿಂದ ವಾಚಕರು ಇಂದು ಉಪಸ್ಥಿತವಾಗಿರುವ ಕಷ್ಟವನ್ನರಿತು ತಮ್ಮ ಚಂದಾ ಹಣವನ್ನು ಪಾವತಿಮಾಡಿ ನಮ್ಮನ್ನು ತಮ್ಮ ಹೃತ್ಪೂರ್ವಕ ಬೆಂಬಲದಿಂದ ಪ್ರೋತ್ಸಾಹಿಸುವರಾಗಿ ನಂಬಿರುವೆವು. ಮುಂದಿನ ವಾರದಿಂದ ರಾಯಲ್ ಆಕಾರದ ನಾಲ್ಕು ಪುಠಗಳನ್ನು ಕೊಡುವ ಏರ್ಪಾಡು ಮಾಡಿರುವೆವು. ಪುಠ ಸಂಖ್ಯೆ ಕಡಿಮೆಯಾದ ವ್ಯಸನ ನಮಗೂ ಪೂರಾ ಇದೆ. ವಾಚಕರ ಹಸ್ತಗಳಲ್ಲಿ ಈ ಕೇವಲ ನಾಲ್ಕು ಪುಠಗಳನ್ನಿಡಲು ನಮಗೂ ಸಂಕೋಚವಾಗುತ್ತದೆ. ಆದರೆ ಈ ನಾಲ್ಕು ಪುಠಗಳಲ್ಲಿಯೇ ಅತ್ಯುತ್ತಮವಾದ ವಿಚಾರಗಳನ್ನು ತುಂಬಿಕೊಟ್ಟು ನಮ್ಮಿಂದ ಸಾಧ್ಯವಾದ ಪ್ರಯತ್ನವನ್ನು ಮಾಡುವೆವು.

ನಮ್ಮ ಮನಸ್ಸಿಗೊಪ್ಪುವಂತೆ ವಾಚಕರ ಸೇವೆಯನ್ನು ಮಾಡಲು ಅನುವಾಗಲು ಯುದ್ಧವು ಬೇಗ ಮುಗಿಯಬೇಕು. ಸರ್ವಕ್ಷೇತ್ರಗಳಲ್ಲೂ ಶಾಂತಿಯು ಪಸರಿಸಿ ಜನಜೀವನವು ಕ್ಷೋಭಾರಹಿತವಾಗಿ ಸ್ಥಿಮಿತತೆಯನ್ನು ಹೊಂದಬೇಕು. ಕಾಗದವು ಆಗ್ಗವಾಗಿ ದೊರೆಯುವಂತಾಗಬೇಕು. ಆಗ ಕೊಡಗು ಪತ್ರಿಕೆಯು ಹಿಂದಿನಂತೆ ಹನ್ನೆರಡು ಪುಠದಿಂದ ನಿಮ್ಮ ಚರಣಸೇವೆಯನ್ನು ಮಾಡುವದು. ಆ ವರೆಗೆ ಈ ಕಿಂಚಿತ್ ಪ್ರಮಾಣದ ಪುಠಗಳಿಂದ ತೃಪ್ತರಾಗಬೇಕಾಗಿ ನಮ್ಮ ಸವಿನಯ ಪ್ರಾರ್ಥನೆ.

ವ ರ್ತ ಮಾ ನ.

ಕೊಡಗಿನ ಸಿವಿಲ್ ಸರ್ಜನರಾದ ಮಿ. ಜೆ. ಡಬ್ಲ್ಯೂ. ಟ್ರೈನರ್‌ರವರು ತಾ. 12–2–45 ರಿಂದ ನಿವೃತ್ತರಾಗುವರೆಂದು ತಿಳಿಯಬಂದಿದೆ.

ಬಟ್ಟೆಯ್ಯು ನಿಶ್ಚಿತ ಕ್ರಯದ ಪಟ್ಟಿಯನ್ನು ಬಹಿರಂಗವಾಗಿ ಅಂಗಡಿಯಲ್ಲಿ ಇಡಲಿಲ್ಲವೆಂಬ ಆಪಾದನೆಯ ಮೇಲೆ ಕೇಸು ಆಗಿ ಮಡಿಕೇರಿಯ ಒಟ್ಟೆ ವ್ಯಾಪಾರಿ ಶ್ರೀ ನೆರವಂಡ ಉತ್ತಪ್ಪನವರಿಗೆ ಇಲ್ಲಿಯ ಜಿಲ್ಲಾ ಮೇಜಿಸ್ಟ್ರೇಟರು ರೂ. 30 ಜುಲ್ಮಾನೆ ವಿಧಿಸಿದ್ದರು. ಇದರ ಅಫೀಲಿನ ವಿಚಾರಣೆಯು ಜ್ಯುಡಿಶಿಯಲ್ ಕೋರ್ಟಿನಲ್ಲಿ ನಡೆದು ಜ್ಯುಡಿಶಿಯಲ್ ಕಮಿಷನರು ಜುಲ್ಮಾನೆಯನ್ನು ರದ್ದುಮಾಡಿರುವರಾಗಿ ವರ್ತಮಾನ.

ಲೋಕಸೇವಾ ನಿರತೆ ಡಿ. ಸಾಕಮ್ಮನವರು ಸೋಮವಾರಪೇಟೆ ಹೈಸ್ಕೂಲಿಗೆ ರೂ. 20,000/-ಕೊಟ್ಟಿರುವರಾಗಿ ತಿಳಿಯಬರುತ್ತದೆ.

ಕೊಡಗು ಉದ್ಯೋಗಸ್ಥರ ಸಹಕಾರ ಸ್ಟೋರಿನಲ್ಲಿ ಇಲೆಕ್ಟ್ರಿಕ್ ಬಲ್ಬುಗಳು ಸಾರ್ವಜನಿಕರಿಗೆ ಮಾರಾಟಕ್ಕೆ ವೆಂದೂ ಬೇಕಿರುವವ ಕ ಅವರಿಗೆ ಕ

ಕಸ್ತೂರ್‌ಬಾ ಸ್ಮಾರಕನಿಧಿಯ ಕಾರ್ಯಕಾರಿ ಮಂಡಳಿಯು ಮಿಟಿಂಗು ತಾ. 26–1–45 ರಲ್ಲಿ ಮಡಿಕೇರಿ ಇಸೆಂಟ್ರಲ್ ಬ್ಯಾಂಕ್ ಹಾಲ್‌ನಲ್ಲಿ ನಡೆಯಲಿರುವದು.

ಕೊಡಗು ಕಾಂಗ್ರೆಸ್ ಸಮಿತಿಯ ಕಾರ್ಯಸಮಿತಿಯ ಮೀಟಿಂಗೊಂದು ತಾ. 23–1–45 ರಲ್ಲಿ ವಿರಾಜಪೇಟೆಯಲ್ಲಿ ನಡೆಯುವದು.

ವ್ಯವಸಾಯಕ್ಕೆ ಬೇಕಾದ ಸುಮಾರು 400 ಟನ್ನು ನೆಲಗಡಲೆ ಹಿಂಡಿಗೊಬ್ಬರ, 25 ಟನ್ನು ಅಮೋನಿಯಮ್ ಸಲ್ಫೇಟನ್ನು ಮಡಿಕೇರಿ, ವೀರಾಜಪೇಟೆ, ಪೊನ್ನಂಪೇಟೆ, ಫ್ರೇಜರ್‌ಪೇಟೆ, ಸೋಮವಾರಪೇಟೆ ಈ ಕೇಂದ್ರಗಳಲ್ಲಿ ಸಂಗ್ರಹಿಸಿಡಲಾಗಿದೆಯೆಂದೂ ಯೋಗ್ಯ ವ್ಯವಸಾಯಗಾರರಿಗೆ ಅರ್ಧ ದರದಲ್ಲಿ ಇದ್ದನ್ನು ಕೊಡಲಾಗುವದೆಂದೂ, ಬೇಕಾದವರು ವ್ಯವಸಾಯ ಇಲಾಖಾಧಿಕಾರಿಗಳಿಗೆ ಅಜಿ ಬರಕೊಳ್ಳಬೇಕೆಂದೂ ವ್ಯವಸಾಯಕ್ಕೆ ಬೇಕಾದ ಉತ್ತಮ ಬೀಜವೂ ಕೂಡ ಮಾರ್ಕೆಟ್ ದರದಲ್ಲಿ ಕೊಡಲ್ಪಡುವದೆಂದೂ ತಿಳಿಯಬರುತ್ತದೆ.

ಭಾತ್ಮಿ.

ಗಾಡಿ ಬಾಡಿಗೆ.

ಗಾಡಿ ಬಾಡಿಗೆಯನ್ನು 5 ಮೈಲಿನ ದೂರದ ಒಳಗೆ ಮೈಲಿಗೆ 10 ಆಣೆ, 5 ಮೈಲು ಮೇಲ್ಪಟ್ಟು ಮೈಲಿಗೆ 8 ಆಣೆಗೆ ಏರದಂತೆ ನಿಶ್ಚಯಿಸುವ ಯೋಜನೆಯಲ್ಲಿ ಸರಕಾರವು ಇರುವ ದೆಂದು ತಮ್ಮ ಪತ್ರಿಕೆಯಲ್ಲಿ ಕಂಡು ಆನಂದವಾಯ್ತಾದರೂ, ಗಾಡಿಯ ಭರ್ತಿಯ ವಿಚಾರವನ್ನು ಸರಕಾರವಾಗಲೀ, ತಾವಾಗಲೀ ಭಿಗಾ ತೆಗೆದುಕೊಂಡಂತೆ ಕಂಡುಬರಲಿಲ್ಲ. ಬಾಡಿಗೆಯ ದರವೇನೋ ಮೇಲ್ಕಂಡಂತೆ ನಿರಖು ಮಾಡಲ್ಪಟ್ಟರೂ ಡಿ. ಪಿ. ಡಬ್ಲ್ಯು. ರಸ್ತೆಯಲ್ಲಿ ಗಾಡಿ ಒಂದರ 120 ಪರೆ ಬತ್ತ ಭರ್ತಿಯೆಂದೂ, ಡಿಸ್ಟ್ರಿಕ್ಟ್ ಬೋರ್ಡು ಮತ್ತು ನಾಡು ರಸ್ತೆಗಳಲ್ಲಿ 60 ಪರೆ ಬತ್ತದ ಭರ್ತಿ ಎಂದೂ ನಿರಖು ಮಾಡುವದು ಉತ್ತಮ. ಇಲ್ಲವಾದರೆ ನಾಡು ರಸ್ತೆಗಳಲ್ಲಿ ಬತ್ತ ಹೇರಲು ಗಾಡಿ ಸಿಕ್ಕದೆ ಬಹಳ ತೊಂದರೆಯೊಗಬಹುದು. ಈ ಅಂಶವನ್ನು ನಿಗಾ ತೆಗೆದುಕೊಳ್ಳಲಿದ್ದರೆ, ನಾಡು ರಸ್ತೆಗಳಲ್ಲಿ 60 ಪರೆಗಿಂತಲೂ ಹೆಚ್ಚು ಭರ್ತಿ ಮಾಡಲಾಗದ್ದರಿಂದ ಗಾಡಿಯವನಿಗೆ ಐದು ಮೈಲಿನ ದೂರದೊಳಗೆ ಮೈಲು ಒಂದರ 5 ಆಣೆ, ಐದು ಮೈಲಿನ ಮೇಲ್ಪಟ್ಟು ಮೈಲಿಗೆ ನಾಲ್ಕಾಣೆ ಮಾತ್ರ ಬಾಡಿಗೆ ಸಿಕ್ಕಿ ಪೂರಾ ಆ ನ್ಯಾಯವಾಗುತ್ತದಲ್ಲದೆ ಸನುಯುಕ್ತೆ ಸರಿಯಾಗಿ ಗಾಡಿ ಸಿಕ್ಕದೆ ರೈತನಿಗೂ ತೊಂದರೆಯಾಗುತ್ತೆ. ಈಗಿನ ಕಾಲದಲ್ಲಿ ಗಾಡಿ ಎತ್ತು ದೊರೆಯುವದೇ ದುರ್ಲಭ. ಸಿಕ್ಕಿದರೂ 800 ಯಾ 1000 ರೂಪಾಯಿಗಳಿಗೆ ಕಡಿಮೆ ಇಲ್ಲ. ಈ ರೀತಿ ದೊಡ್ಡ ಹಣ ಕೊಟ್ಟು ತರುವ ಎತ್ತುಗಳನ್ನು ಸಾಕಲು ಕಂಪ್ಯೂಲ್ (ದಿನಕ್ಕೆ 4 ಸೇರು ಹುರುಳಿ ರೂ 1, ಪಭೇರು ಪತ್ತಿ, ಬೀಜ 8 ಆಣೆ, ಎಂಟು ಕಂತೆ ಹುಲ್ಲು 12 ಆಣೆ. ಆಳಿಗೆ ಕೂಲಿ 1.4.0 ರೂ. ಹೀಗೆ ರೂ. 3.8.0. ಒಂದು ವಾರಕ್ಕೆ ರೂ. 24.8.0) ಪ್ರಕಾರ ಹುರುಳಿ ಸಿಕ್ಕಿದರೂ ಸಹ ದಿನ ಒಂದಕ್ಕೆ ಗಾಡಿಯವನಿಗೆ 3.8.0 ರೂ. ಖರ್ಚು ಬೇಕು. ಅಂದ ಮೇಲೆ ಒಂದು ವಾರಕ್ಕೆ 24.8.0 ರೂ. ಖರ್ಚು ಬೇಕು. ಒಂದು ವಾರದಲ್ಲಿ ಹೆಚ್ಚೆಂದರೆ ನಾಲ್ಕು ಬಾಡಿಗೆ ಸಿಗಬಹುದು. ಈಗಿನ ನಾಲ್ಕೈದು ಆಣೆ ಪ್ರಕಾರ ಬಾಡಿಗೆ ಎಂದರೆ ಇರಪು, ಮೂರು ರೂಪಾಯಿಗೆ ಏರದು. ಅಂದರೆ ವಾರಕ್ಕೆ ಹತ್ತು ಹನ್ನೆರಡು ರೂಪಾಯಿ ಬಾಡಿಗೆ ದೊರೆತಂತಾಯಿತು. ಆದ್ದರಿಂದ ಗಾಡಿ ಬಾಡಿಗೆ ನಿರಖು ಮಾಡುವುದಾದರೆ ಡಿ. ಪಿ. ಡಬ್ಲ್ಯು. ರಸ್ತೆಗಳಲ್ಲಿ ಮೈಲು ಒಂದರ 120 ಪರೆಯ ಭರ್ತಿಗೆ ಐದು ಮೈಲು ಒಳಗೆ 10 ಆಣೆ. ಇದಕ್ಕೆ ಮೇಲ್ಪಟ್ಟು 8 ಆಣೆಯಂತೆಯೂ, ನಾಡು ರಸ್ತೆ ಮತ್ತು ಡಿಸ್ಟ್ರಿಕ್ಟ್ ಬೋರ್ಡು ರಸ್ತೆಗಳಲ್ಲಿ 60 ಪರೆಯ ಭರ್ತಿಗೆ 5 ಮೈಲು ಒಳಗೆ 10 ಆಣೆ, ಇದಕ್ಕೆ ಮೇಲ್ಪಟ್ಟು ಮೈಲಿಗೆ 8 ಆಣೆ ನಿರಖು ಮಾಡುವುದುತ್ತಮವೆಂದು ಸೂಚಿಸಬಯಸುತ್ತೇನೆ.

ಎಂ. ಎ. ಪೂವಯ್ಯ.

ಸರಕಾರಿ ಉದ್ಯೋಗಸ್ಥರು, ಸಾರ್ವಜನಿಕ ಸಂಸ್ಥೆಗಳು.

ಸರಕಾರಿ ನೌಕರರ ವಿಷಯದಲ್ಲಿ ಇತ್ತೀಚೆಗೆ ಸರಕಾರ ಘೋರಣೆಯು ವಿಚಿತ್ರ ರೀತಿಯಲ್ಲಿ ಮೂರ್ಪಡುತ್ತಿದೆ. ಹಿಂದೆ ಸರಕಾರಿ ಉದ್ಯೋಗಸ್ಥರು ಸಹಕಾರಿ ಸೆಂಟ್ರಲ್ ಬ್ಯಾಂಕಿನ ಕಾರ್ಯಕಾರಿ ಮಂಡಳಿಯ ಸದಸ್ಯರಾಗಿ ಆರಿಸಿ ಬರುತ್ತಿದ್ದರು. ಸಾರ್ವಜನಿಕರಿಂದಲೇ ಆರಿಸಿ ಬಂದರೂ ಬ್ಯಾಂಕಿನ ಆಡಳಿತವರ್ಗ ಸೇರಕೂಡದೆಂದು ಸರಕಾರಿ ನೌಕರರಿಗೆ ಸೂಚನೆ ಕೊಟ್ಟಿತು. ಸರಕಾರಿ ನೌಕರರು ಸಹಕಾರಿ ಸಂಸ್ಥೆಗಳಲ್ಲಿ, ತಮ್ಮ ಆ ಸ್ಥಳಗಳಿಗೆ ಬಿರುತ್ತಿರಲಿಲ್ಲ ರುವವರು ಆ ಜಾನಾಪತಿಗೆ ನಿಲ್ಲ

ಬ್ಯಾಂಕಿನ ಮುಖ್ಯ ಇತರ ಸದಸ್ಯರಾದ ಸಾಧಾರಣ ೨೦,೦೦೦ ಸರಕಾರಿ ಉದ್ಯೋಗಸ್ಥರಾದವರು ಬಹುಶಃ ೨,೦ ದಿಗೆ ಕಡಿಮೆಯಾಗಲಿಲ್ಲವರು. ಬ್ಯಾಂಕಿನ ಸದಸ್ಯ ಸ್ಥಳಗಳಾಗಿರುವ ಸಮರ್ಪಕವಾಗಿ ಕೆಲಸ ಮಾಡುವ ಅನೇಕ ಸಹಕಾರ ಸಂಸ್ಥೆಗಳು ಸರಕಾರಿ ನೌಕರರಿಂದ ಆಗಿದ್ದು ಅವರಿಂದಲೇ ನಡಿಸಲ್ಪಡುತ್ತಿವೆ. ಹೀಗಿರುವಾಗ ಸಹಕಾರಿ ಸಂಸ್ಥೆಗಳ ಎಂಟನೇ ಒಂದಂಶದಷ್ಟು ಸಹ ಸ್ಯರು ಬ್ಯಾಂಕಿನ ಮೆಂಬರಾಗಿದ್ದು, ಅಲ್ಲಿ ಕೆಲಸಮಾಡಿದ್ದು ಬ್ಯಾಂಕಿನ ಆಡಳಿತದಲ್ಲಿ ಕೈಹಾಕಬಾರದೆಂಬ ಅಪ್ಪಣೆ ಕೇವಲ ಸಹಕಾರ ತತ್ವಕ್ಕೆ ವಿರೋಧವಲ್ಲವೇ?

ಇತ್ತೀಚೆಗೆ ಮುಜ್ರಾಯಿ ಇಲಾಖೆಯ ಸಂಬಂಧವಾಗಿ ಇದೇ ರೀತಿಯ ಘೋರಣೆಯನ್ನು ಸರಕಾರವು ತನ್ನ ನೌಕರರ ವಿಷಯದಲ್ಲಿ ತೋರಿಸಿದೆ. ಈ ಇಲಾಖೆಯ ಕಾರ್ಯಕಾರಿ ಮಂಡಳಿಯಲ್ಲಿನ 15 ಮಂದಿ ಸದಸ್ಯರಲ್ಲಿ ಇಬ್ಬರು ಮಾತ್ರ ಸರಕಾರಿ ನೌಕರರಾಗಬಹುದೆಂದೂ ಆಲ್ಲದೆ ಆ ಇಬ್ಬರೂ ಅಧ್ಯಕ್ಷರಾಗಲೇ, ಉಪಾಧ್ಯಕ್ಷರಾಗಲೇ ಆಗಬಾರದೆಂದೂ ಗಜಟಿನಲ್ಲಿ ಪ್ರಕಟವಾಗಿದೆ. ಆದರೆ ಸರಕಾರಿ ಉದ್ಯೋಗಸ್ಥರು ಸಾರ್ವಜನಿಕ ಸಂಸ್ಥೆಗಳಲ್ಲಿ ಕೆಲಸ ಮಾಡಬಾರದೆಂಬುವುದೇ ಸರಕಾರದ ಘೋರಣೆಯಾಗಿರುವ ಪಕ್ಷದಲ್ಲಿ ಈ ಇಬ್ಬರು ಸದಸ್ಯರಿರುವ ರಿಯಾಯಿತಿಯನ್ನಾದರೂ ಸರಕಾರದವರು ಏಕೆ ಕೊಡಬೇಕು? ಎಂದರೆ ಮತ ಸಂಬಂಧವಾದ ಇಂಥಾ ಸಂಸ್ಥೆಗಳಲ್ಲಿ ಸರಕಾರಿ ಉದ್ಯೋಗಿಗಳು ಕೆಲಸ ಮಾಡುವುದನ್ನು ತಪ್ಪಿಸುವುದು ನ್ಯಾಯವಲ್ಲವೆಂದು ಸರ್ಕಾರದವರು ತಿಳಿದುಕೊಂಡಿರಬಹುದಾಯಿತಿಯನ್ನು ಕೊಟ್ಟಿಂತಿದೆ. ಆ ಹಿಂದೆಯೇ ವಿಕ್ಟೋರಿಯಾ ಮಹಾರಾಣಿಯವರ ಮ್ಮ ಬ್ರಿಟಿಷ್ ಸರಕಾರವು ಹಿಂದೂ ಚಾರದಲ್ಲಿ ಯಾವ ರೀತಿಯಲ್ಲೂ ಕೈ ದು ಘೋಷಿಸಿದ್ದನ್ನು ಸರಕಾರಿ ಉದ್ಯೋ ತರ ಪ್ರಜೆಗಳಂತೆ ತಮ್ಮ ಮತ ಸಂ ಕಾರ್ಯಗಳಲ್ಲಿ ಸ್ವತಂತ್ರರೆಂಬುವು ರವೂ ನೆನಪಿನಲ್ಲಿಟ್ಟುಕೊಂಡಿದ್ದರೆ ಯೆ ಪ್ಪವಾಗಿದೆ. ಹೀಗಿದ್ದ ಮೇಲೆ ಭರವಸೆಯನ್ನು ಸಂಪಾದಿಸಿ ಆ ರು ಸದಸ್ಯರ ಸಂಖ್ಯೆ ಎರಡಾಗಲೆ ಅವರು ಸರಕಾರಿ ಉದ್ಯೋಗಸ್ಥರೆ ಮತ ಸಂಬಂಧವಾದ ಸಂಸ್ಥೆಯಲ್ಲಿ ಯಾವ ಆಡಚಣೆಯೂ ಇರಬಾರದು ರಿ ಉದ್ಯೋಗಸ್ಥರಿಗೇನೂ ಕಾಡಿ ಉಮೇದ್ವಾರರ ಜೊತೆಯಲ್ಲಿ ತಾವೂ ತವನ್ನು ಪಡೆದು ತಮ್ಮ ಕೈಯ್ಯಲ್ಲ ಸೇವೆಯನ್ನು ಮಾಡುತ್ತಾರೆ. ಆದ ಕಾರಕ್ಕೆ ನಂಬಿಗೆ ಇಲ್ಲವೇ? ಸಾ ಕೆಲಸಕ್ಕೆ ಇದು ಆಡಚಣೆಯ ಇಬ್ಬರು ಸದಸ್ಯರಿರುವುದಕ್ಕೂ ಆವರ ಲ್ಲ. ಮುಜ್ರಾಯಿ ಇಲಾಖೆಗೆ ದ್ರವ್ಯ ಡುವ ಸರಕಾರವೂ, ತಮ್ಮ ನೌಕರರೂ ನನ್ನು ನೋಡಲು ಆಡ್ಡಿಪಡಿಸುವುದು ಗಂಟು.

ಮುಜ್ರಾಯಿ ರೀಜೀಯನ್ ಎಂಪ್ಲಾ ಬೋರ್ಡಿಗೆ ಸರಕಾರಿ ನೌಕರರೂ ನಿಲ್ಲಬಾರದೆಂ ಚಣೆ ಕಂಡು ಬಂದಿಲ್ಲ.

ಇದಕ್ಕೆ ಮೊದಲು ಮುಜ್ರಾಯಿ ಇಲಾಖಾ ಸ್ಥಾನಾವಣೆಗೆ ನಿಲ್ಲಬೇಕಾದರೆ ಚೀಫ್ ಕಮೀಷನರ ಅಪ್ಪಣೆಯನ್ನು ಪಡೆಯಬೇಕೆಂಬ ಖಾನೂನು ಬಂದಿತ್ತು. ಇದಕ್ಕೂ ತಕ್ಕಷ್ಟು ಕಾರಣಗಳಿದ್ದಿಲ್ಲ. ನೌಕರರು ಸರಕಾರಿ ಕೆಲಸದ ದೃಷ್ಟಿಯಿಂದ 'ಚಿಂತೆ ಇಲ್ಲ' ವೆಂದರೂ ಕೂಡ ಹೊಸ ಆಡಚಣೆ ಹೇಳದ ಕೇಳದ ನ್ಯಾಯ.

ಈ ಸಮಿತಿಯಲ್ಲಿರುವ ಸರ್ಕಾರಿ ಉದ್ಯೋಗಸ್ಥರಾಗಲೀ, ಉಪಾಧ್ಯಕ್ಷರಾಗಲೀ ತಮ್ಮ ವರ್ತನೆಯಿಂದ ಈ ಅಪ್ಪಣೆಗೆ ಒಂದು ಹೇಳಿ ಅವಕಾಶ ಕೊಟ್ಟಿದ್ದರೂ ಮುಂದೆ ಬರತಕ್ಕವರಿಗೆ ಇದು ಅನ್ಯಾಯವಲ್ಲವೇ? ಹಿಂದೆ ಸರ್ಕಾರಿ ಉದ್ಯೋಗದಲ್ಲಿದ್ದಾಗ ಆದರ ಅಧ್ಯಕ್ಷರಾಗಿದ್ದ ಈಗಿನ ಚೀಫ್ ಕಮೀಷನರವರು ಇದನ್ನು ಪುನರಾಲೋಚಿಸುವರೇ?

"ಓಂ"

ಮಾರಾಟಕ್ಕಿದೆ.

ಮಡಿಕೇರಿ ಮಹದೇವಪೇಟೆಯ ವ-ನ್ನೀರಿನ ಅನುಕೂಲತೆ, ಎಲೆಕ್ಟ್ರಿಕ್ ಪವರುವ, ನೆಲಕ್ಕೆ ಹಂಚು ಹಾಕಿತ್ಯಮಾ ಆಫೀಸಿನಲ್ಲಿರುವ ಮಹಡಿಯು ಹೊಸಮನೆ ಸಮೇತ ಮಾಕ್ಕಿದೆ. ಬನಕರುಗಳನ್ನು ಸಾಕಲು ಇನ್ನಿತರ ಯಾವುದೇ ಸೌಕರ್ಯಕ್ಕೂ ಕೂಲವಿದೆ. ಕಾನ್ವೆಂಟ್ ಯಾ ಲು ಶಾಲೆಗಳಿಗೆ ಹೋಗುವ ಮಾ ಮಾರ್ಕೆಟ್ಟಿಗೂ, ಗಾಳಿ ವಿಹಾರಕ್ಕೂ ತ್ಯಮವಾದ ಸ್ಥಳವಾಗಿದೆ. ಹೆಚ್ಚಿ ರಕ್ಕೆ ಈ ಕೆಳಗಿನ ಅಡ್ರೆಸಿಗೆ